ಮೇಲ್ದರ್ಜೆಗೇರಿಸಲಾಗಿದ್ದು, 147 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಸದ್ಯದಲ್ಲೆ ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಡಾ॥ ಡಿ.ಎಂ. ನಂಜುಂಡಪ್ಪ ನವರ ಪ್ರಾದೇಶಿಕ ಅಸಮತೋಲನ ವರದಿಯ ಶಿಫಾರಸ್ಸು ಅನ್ವಯ ರಾಜ್ಯದ 39 ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಮಾತ್ರ ಅವಶ್ಯಕತೆ ಅನುಸಾರ 69 ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗುತ್ತಿದೆ. ಇವುಗಳನ್ನು ಹೊರತುಪಡಿಸಿ ರಾಜ್ಯದ ಬೇರೆಕಡೆ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯಲು ಅವಕಾಶ ಇರುವುದಿಲ್ಲ. ಆದಾಗ್ಯೂ ಯಡಹಳ್ಳಿ ಗ್ರಾಮಕ್ಕೆ ಮತ್ತು ಇನಾಮಹೊಂಗಲ ಗ್ರಾಮಗಳಿಗೆ ಸವದತ್ತಿ ತಾಲ್ಲೂಕಿನ ವಿಶೇಷ ಜಾನುವಾರು ತಳಿ ಅಭಿವೃದ್ಧಿ ಪಶು ಪರೀಕ್ಷಕರನ್ನು ವಾರದಲ್ಲಿ ಮೂರು ಬಾರಿ ದಿನ ಬಿಟ್ಟು ದಿನದಂತೆ ಪಶುವೈದ್ಯಕೀಯ ಸೇವೆ ನೀಡಲು ನಿಯೋಜಿಸಲಾಗಿದೆ.

4660 (5016) ಶ್ರೀ ಮುನಿಯಪ್ಪ. ಎಸ್. ಎಂ (ಚಿಕ್ಕಬಳ್ಳಾಪುರ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳು ಎಷ್ಟು;

ಆ) ವಿದ್ಯಾರ್ಥಿನಿಲಯಗಳಿಗೆ ನಿಗದಿಪಡಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು;

ಇ) ಕೋಲಾರ ಜಿಲ್ಲೆಯಲ್ಲಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು;

ಈ) ರಾಜ್ಯದ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಸಮಾನವಾಗಿ ಅನುದಾನ ಹಂಚಲಾಗುತ್ತಿದೆಯೇ;

ಉ) ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಫಲಾನುಭವಿಗಳು ಹೆಚ್ಚಾಗಿದ್ದು, ಹೆಚ್ಚಾಗಿರುವ ಫಲಾನುಭವಿಗಳ ಅನುಪಾತದಂತೆ ಅನುದಾನ ನೀಡಲಾಗುತ್ತಿದೆಯೇ;

ಹಾಗಿಲ್ಲದಿದ್ದಲ್ಲಿ ಹೆಚ್ಚಿನ ಅನುದಾನ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ, ಆ) ರಾಜ್ಯದಲ್ಲಿನ ವಿದ್ಯಾರ್ಥಿನಿಲಯಗಳ ಸಂಖ್ಯೆ ಕೆಳಕಂಡಂತಿದೆ.

ಇಲಾಖೆ	ವಿದ್ಯಾರ್ಥಿನಿಲಯಗಳ ವಿವರ	ವಿದ್ಯಾರ್ಥಿ ನಿಲಯಗಳ ಸಂಖ್ಯೆ	ಫಲಾನುಭವಿಗಳ ಸಂಖ್ಯೆ
ಸಮಾಜ ಕಲ್ಯಾಣ ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	1154	71740
	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ	282	20680
ಹಿಂದುಳಿದ ವರ್ಗಗಳ ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	1171	60330
	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ	261	16525
ಪರಿಶಿಷ್ಟ ವರ್ಗಗಳ ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	113	5420
	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ	11	550
ಅಲ್ಪಸಂಖ್ಯಾತರ ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	16	800
	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ	7	350

ಇ) ಕೋಲಾರ ಜಿಲ್ಲೆಯಲ್ಲಿ ವಿದ್ಯಾರ್ಥಿನಿಲಯಗಳ ಸಂಖ್ಯೆ :

ಇಲಾಖೆ	ವಿದ್ಯಾರ್ಥಿನಿಲಯಗಳ ವಿವರ	ವಿದ್ಯಾರ್ಥಿ ನಿಲಯಗಳ ಸಂಖ್ಯೆ	ಫಲಾನುಭವಿಗಳ ಸಂಖ್ಯೆ
ಸಮಾಜ ಕಲ್ಯಾಣ ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	96	6796
	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ	25	1700
ಹಿಂದುಳಿದ ವರ್ಗಗಳ ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	60	3850

ಪರಿಶಿಷ್ಟ ವರ್ಗಗಳ ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	3	150

ಈ) ಪ್ರತಿ ವಿದ್ಯಾರ್ಥಿನಿಲಯಕ್ಕೂ ಮಂಜೂರಾತಿ ಸಂಖ್ಯಾಬಲ ಆಧರಿಸಿ ಆಯವ್ಯಯ ನಿಗದಿಪಡಿಸಲಾಗಿದೆ.

ಉ) ಹೌದು, ಸರ್ಕಾರವು ಪ್ರತಿ ವಿದ್ಯಾರ್ಥಿನಿಲಯಗಳಲ್ಲಿರುವ ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಒದಗಿಸುತ್ತಿದೆ.

ಅನ್ವಯಿಸುವುದಿಲ್ಲ.

4661 ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ) :– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ಒಟ್ಟು ಕೈಮಗ್ಗ ನೇಕಾರರ ಸಂಖ್ಯೆ ಎಷ್ಟು;

ಆ) ಈ ನೇಕಾರರು ತೀವ್ರ ಸಂಕಷ್ಟದಲ್ಲಿದ್ದು ಇವರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಈ) ಬೀಳಗಿ ತಾಲ್ಲೂಕಿನ ಗಿರಿಸಾಗರ ಅಥವಾ ನಾಗರಾಳ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ನೇಕಾರರಿಗೆ ಕೆ.ಹೆಚ್.ಡಿ.ಸಿ. ಕಛೇರಿಯನ್ನು ಪ್ರಾರಂಭಿಸಲಾಗುವುದೇ?

ಡಾ॥ ಹೆಚ್. ಮಹದೇವಪ್ಪ (ಜವಳಿ ರಾಜ್ಯ ಸಚಿವರು) :

ಅ) ಬಾಗಲಕೋಟೆ ಜಿಲ್ಲೆಯಲ್ಲಿ 1995–96ರ ಗಣತಿಯ ಪ್ರಕಾರ 49723 ಕೈಮಗ್ಗ ನೇಕಾರರು ಇರುತ್ತಾರೆ.

ಆ) ಹೌದು. ನೇಕಾರರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರಿಕೆಯನ್ನು ಪುನಃಶ್ಚೇತನಗೊಳಿಸಲು ಸರ್ಕಾರವು ಹಾಲಿ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಜೊತೆಗೆ 2004–05ನೇ ಸಾಲಿಗೆ ನೇಕಾರರ ವಿಶೇಷ ಪ್ಯಾಕೇಜ್‌ನ್ನು ಘೋಷಿಸಿದ್ದು, ಸೌಲಭ್ಯಗಳು ಈ ಕೆಳಕಂಡಂತಿವೆ :

* ವಿದ್ಯುತ್ ಮಗ್ಗ ನೇಕಾರರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು (ರೂ.1.25–10 ಹೆಚ್ ಪಿ ವರೆಗೆ ಮತ್ತು 10 ಮಗ್ಗಗಳಿಗಿಂತ ಕಡಿಮೆ.